# ಥರ್ಮಾಕೋಲ್ ಬಾಲ್‌ನಲ್ಲಿ ಹುಡುಗಿ

ಈಕೆ ಥರ್ಮಾಕೋಲ್ ಬಾಲ್‌ಗಳಲ್ಲಿ ಅರಳಿದ ಹುಡುಗಿ. ಮೊದಲು ಕಪ್ಪು ಬಟ್ಟೆಯ ಮೇಲೆ ಹುಡುಗಿಯ ಚಿತ್ರವನ್ನು ಬಿಡಿಸಿ. ಥರ್ಮಾಕೋಲ್ ಬಾಲ್‌ಗಳನ್ನು ಫೆವಿಕಾಲ್‌ನಿಂದ ಹುಡುಗಿಯ ಚಿತ್ರಕ್ಕೆ ಅಂಟಿಸಿ. ಹೀಗೆ ಸಿದ್ಧವಾದ ಈ ಹುಡುಗಿಯನ್ನು ಎಲ್ಲರೂ ಬೆರಗುಗಣ್ಣಿನಿಂದ ನೋಡುತ್ತಾ ನಿಂತಿದ್ದರು ಗೆಳೆಯನ ಮದುವೆ ಮನೆಯಲ್ಲಿ.

**-ಜಗದೀಶ ಎಂ. ಸಂಗಣ್ಣವರ,**
**ಬೈಲಹೊಂಗಲ**





# ಹೀಗೂ ಮಾಡಬಹುದು!

ಇತ್ತೀಚೆಗೆ ಶಾಲಾ ತಪಾಸಣೆಗೆಂದು ಬೈಲಹೊಂಗಲ ತಾಲ್ಲೂಕಿನ ಸರಕಾರಿ ಪ್ರೌಢಶಾಲೆ ಹೂಲಿಕಟ್ಟೆಗೆ ಭೇಟಿ ನೀಡಿದ್ದೆ. ಚಿತ್ರಕಲಾ ಶಿಕ್ಷಕರಾದ ಪಾಟೀಲರು ಹಳೆಯ ಲಗ್ನ ಪತ್ರಿಕೆಗಳಿಂದ ನೃತ್ಯದಲ್ಲಿ ತೊಡಗಿರುವ ಬಾಲಕಿಯರ ಚಿತ್ರಗಳು ಹಾಗೂ ಬೇರೆ ಕಾಗದದಿಂದ ಮಾಡಿದ ಚಪ್ಪಲಿಗಳು ಗಮನ ಸೆಳೆದವು. ಮಕ್ಕಳನ್ನೂ ತಮ್ಮೊಂದಿಗೆ ಸೇರಿಸಿಕೊಂಡು ಅವರಿಂದಲೂ ಇಂತಹ ವಸ್ತುಗಳನ್ನು ಮಾಡಿಸುವ ಅವರ ಸೃಜನಶೀಲತೆ ಅನುಕರಣೀಯ.

**-ಶ್ರೀಶೈಲ ಎಸ್. ಅಂಗಡಿ,**
**ಹುಣಶೀಕಟ್ಟಿ**

# ಅಘೋರೇಶ್ವರನ ಆನೆ

ಇಕ್ಕೇರಿಯ ಅಘೋರೇಶ್ವರ ದೇವಾಲಯದ ಪ್ರಧಾನ ದ್ವಾರದ ಮುಂದೆ ಮೆಟ್ಟಿಲುಗಳ ಪಕ್ಕದಲ್ಲಿ ಸುಂದರ ಆನೆಯ ಶಿಲ್ಪ ಸ್ವಾಗತಿಸುತ್ತಾ ನಿಂತಿದೆ. ಕೊರಳಿಗೆ ಗಂಟೆಯ ಸರ ಮತ್ತು ಮೈಯನ್ನು ಮೋಹಕ ಅಲಂಕಾರಗಳಿಂದ ಶೃಂಗರಿಸಿಕೊಂಡಿರುವ ಈ ಆನೆ ತನ್ನ ಗಂಭೀರ ಶೈಲಿಯಲ್ಲಿ ಎಡಗಾಲನ್ನು ಎತ್ತಿ ಮುಂದೆ ಹೋಗಲು ಸಜ್ಜಾಗಿದೆ. ನೈಜತೆಯಿಂದ ಕೂಡಿದ ಈ ಆನೆಯ ಶಿಲ್ಪ ಎಲ್ಲರ ಮನ ಸೆಳೆಯುತ್ತದೆ.

**-ಮಧುರಾ ತಾಂಡೇಲ,**
**ಗಂಗೊಳ್ಳಿ**

